# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 43 ಪ್ರಾ.ಸಾ. : 20**

| | | |
|---|---|---|
| ಸಾಕ್ಷಿಯ ಹೆಸರು | : | ಭಾರತಿ ರಾಮಕೃಷ್ಣ ಕಾಂಬಳೆ |
| ತಂದೆಯ ಹೆಸರು | : | ರಾಮಕೃಷ್ಣ ಕಾಂಬಳೆ |
| ವಯಸ್ಸು | : | 41 ವರ್ಷ |
| ಕೆಲಸ | : | ಕಾರ್ಯದರ್ಶಿಗಳು, ನಾಡುಮಾಸ್ಕೇರಿ ಗ್ರಾಮ ಪಂಚಾಯತಿ, ತಾಃ ಕುಮಟಾ |
| ವಾಸ | : | ನಂದನಗದ್ದ, ಕಾರವಾರ |

**ದಿನಾಂಕಃ 17-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1. 2011 ರಿಂದ 2015 ರ ವರೆಗೆ ನಾನು ಕದ್ರಾ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿ ಹಾಗೂ ಪ್ರಭಾರ ಪಂಚಾಯತ ಅಭಿವೃದ್ದಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 24-02-2014 ರಂದು ಕದ್ರಾ ವೃತ್ತ ನಿರೀಕ್ಷಕರಿಂದ ನಮ್ಮ ಪಂಚಾಯತ್ ಗೆ ಕೋರಿಕೆ ಪತ್ರ ಬಂದಿದ್ದು, ಅದರಲ್ಲಿ ಕದ್ರಾದ ರಾಜೀವನಗರದಲ್ಲಿ ವೇಲು ಇಲ್ಲನ್ ಗುಡಿಯವರು ವಾಸವಾಗಿದ್ದ ಮನೆಯ ನಂಬರ್ ಹಾಗೂ ಅದು ಯಾರ ಮಾಲೀಕತ್ವದಲ್ಲಿರುತ್ತದೆ ಎಂಬ ಮಾಹಿತಿ ನೀಡುವಂತೆ ಕೋರಿದ್ದು, ಅದರಂತೆ ನಾನು ನಮ್ಮ ಕಚೇರಿಯಲ್ಲಿನ ಕರಾಕರಣೆಯ ರಿಜಿಸ್ಟರ್ ನ್ನು ಪರಿಶೀಲಿಸಿ ಹಾಗೂ ಪೊಲೀಸರೊಂದಿಗೆ ಸದರಿ ಮನೆಗೆ ಭೇಟಿ ನೀಡಿ, ಪರಿಶೀಲಿಸಿ, ದಿಃ 27-03-2014 ರಂದು ಸದರಿ ಮನೆಯು ವೇಲು ಇಲ್ಲನ್ ಗುಡಿಯ ಹೆಸರಿನಲ್ಲಿರುತ್ತದೆ ಹಾಗೂ ಮನೆಯ ನಂಬರ್ 511/122 ಇರುತ್ತದೆ ಎಂದು ಮಾಹಿತಿಯನ್ನು ಪತ್ರದ ಮುಖೇನ ನೀಡಿರುತ್ತೇನೆ. ಸಾಕ್ಷಿಯು ತನಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-52 ಎಂದು, ಸಾಕ್ಷಿಯ ಸಹಿಯನ್ನು ನಿಪಿ-52(ಎ) ಎಂದು, ಸಾಕ್ಷಿಯು ತಾನು ನೀಡಿದ ಮಾಹಿತಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-53 ಎಂದು, ಸಾಕ್ಷಿಯ ಸಹಿಯನ್ನು ನಿಪಿ-53(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ.ವಕೀಲರಿಂದ**

2. ನಾನು ನಮ್ಮ ಪಂಚಾಯತನ ಯಾವುದೇ ರಿಜಿಸ್ಟರ್ ನ್ನು ಪರಿಶೀಲನೆ ಮಾಡಿಲ್ಲ ಹಾಗೂ ಯಾವುದೇ ಸ್ಥಳಕ್ಕೆ ಬೇಟಿ ನೀಡಿಲ್ಲ ಹಾಗೂ ಪೊಲೀಸರ ಪ್ರಕರಣಕ್ಕೆ ಪೂರಕವಾಗುವಂತೆ ನಿಪಿ–53 ರಲ್ಲಿ ಸುಳ್ಳು ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ